(ಊ) ವಿಷಯ :- <u>ಗಿಣಿಗೇರಾ-ಮಹಬೂಬ್ ನಗರ ರೈಲ್ವೆ ಹೊಸ ಮಾರ್ಗದ ಕಾಮಗಾರಿಗೆ ರಾಜ್ಯ ಸರ್ಕಾರದ ವತಿಯಿಂದ ಹಣ ಬಿಡುಗಡೆ ಮಾಡದಿರುವ ಬಗ್ಗೆ :</u>

ಶ್ರೀ ವೆಂಕಟರಾವ್ ನಾಡಗೌಡ :- ಮಾನ್ಯ ಉಪಾಧ್ಯಕ್ಷರೆ, ಮುನಿರಾಬಾದ್-ಮೆಹಬೂಬ್ ನಗರದ ರೈಲು ಮಾರ್ಗಕ್ಕೆ ಸಂಬಂಧಿಸಿದಂತೆ ನಾನು ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜೆ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,

ಮುನಿರಾಬಾದ್-ಮೆಹಬೂಬ್‌ನಗರ ಹೊಸ ರೈಲು ಮಾರ್ಗವು ಒಂದು ದಶಕದ ಹಿಂದೆ ಮಂಜೂರಾಗಿದೆ. ಈ ಮಾರ್ಗದ ಒಟ್ಟಾರೆ ಉದ್ದವು 222 ಕಿ.ಮೀ ಇದ್ದು ಸುಮಾರು 190 ಕಿ.ಮೀ ರಾಜ್ಯದಲ್ಲಿದ್ದು ಉಳಿದ ಭಾಗವು ಆಂಧ್ರಪ್ರದೇಶದಲ್ಲಿರುತ್ತದೆ. ಈ ಮಾರ್ಗದ ಪ್ರಾಮುಖ್ಯತೆಯನ್ನು ಗಮನಿಸಿ 190 ಕಿ.ಮೀ ಉದ್ದದ ಈ ರೈಲು ಮಾರ್ಗದ (ಕರ್ನಾಟಕ ಗಡಿ ಭಾಗ) ಕಾಮಗಾರಿಯನ್ನು ರಾಜ್ಯ ಸರ್ಕಾರ ಹಾಗೂ ರೈಲ್ವೆ ಮಂತ್ರಾಲಯ ಶೇ. 50 : 50 ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೊಳ್ಳಲು ದಿನಾಂಕ 11-09-07 ಸಂಖ್ಯೆ IDD 13 NSW 03 ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ರೈಲು ಮಾರ್ಗ ನಿರ್ಮಾಣದಿಂದ ಹಿಂದುಳಿದ ಜಿಲ್ಲೆಗಳಾದ ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಭಾಗದ ಜನರಿಗೆ ಅತ್ಯಂತ ಉಪಯೋಗವಾಗಲಿದೆ. ಮತ್ತು ಈ ಮಾರ್ಗದ ಅನುಷ್ಠಾನದಿಂದ ಪ್ರಾದೇಶಿಕ ಅಸಮತೋಲನವನ್ನು ಕಡಿಮೆಗೊಳಿಸಿದಂತಾಗುತ್ತದೆ. ಹಾಗೂ ಉತ್ತರ ಕರ್ನಾಟಕ ಭಾಗದ ಗದಗ-ಬಾಗಲಕೋಟೆ-ಧಾರವಾಡ ಜಿಲ್ಲೆಗಳ ಅಭಿವೃದ್ಧಿಗೆ ಪೂರಕವಾಗಲಿದೆ. ಇದರ ಬಗ್ಗೆ ಅಂದಾಜು ವೆಚ್ಚ ರೂ. 700.00 ಕೋಟಿಗಳಾಗಿದೆ.

ಶೇ. 50 : 50 ವೆಚ್ಚ ಹಂಚಿಕೆ ಆಧಾರದಂತೆ ಮುನಿರಾಬಾದ್-ಮೆಹಬೂಬ್‌ನಗರ ಹೊಸ ರೈಲು ಮಾರ್ಗದ ಕಾಮಗಾರಿಗೆ ರಾಜ್ಯ ಸರ್ಕಾರದ ಪಾಲು ರೂ. 350.00 ಕೋಟಿಗಳು. ಈ ಯೋಜನೆಯನ್ನು 3-4 ವರ್ಷಗಳಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಈ ಮಾರ್ಗಕ್ಕೆ ಅಗತ್ಯವಾಗಿ ಬೇಕಾಗಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಪ್ರಕಿಯೆಯು ಪ್ರಗತಿಯಲ್ಲಿದೆ. ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲು ರೈಲ್ವೆ ಇಲಾಖೆಯು ಟೆಂಡರ್ ಕರೆಯಲಾಗಿದೆ. ರಾಜ್ಯ ಸರ್ಕಾರವು 2007-08 ನೇ ಸಾಲಿಗೆ ರೂ. 5.00

ಕೋಟಿಗಳನ್ನು ಬಿಡುಗಡೆ ಮಾಡಿದೆ. ಹಾಗೂ ಪ್ರಸಕ್ತ ಸಾಲಿನಲ್ಲಿ ರೂ. 10.00 ಕೋಟಿಗಳನ್ನು ಬಿಡುಗಡೆ ಮಾಡುವಂತೆ ಕೋರಿ ರೈಲ್ವೆ ಇಲಾಖೆಯಿಂದ ಪ್ರಸ್ತಾವನೆ ದಿನಾಕ 20-01-2009 ರಂದು ಬಂದಿದ್ದು, ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ವೆಂಕಟರಾವ್ ನಾಡಗೌಡ :- ಸನ್ಮಾನ್ಯ ಅಧ್ಯಕ್ಷರೇ, ಈ ರೈಲು ಮಾರ್ಗವು 1997-98ನೇ ಸಾಲಿನಲ್ಲಿ ಅಂದಿನ ಸನ್ಮಾನ್ಯ ಪ್ರಧಾನಿಗಳಾದ ದೇವೇಗೌಡರು ಪ್ರಧಾನ ಮಂತ್ರಿಗಳು ಆಗಿದ್ದಾಗ ಬಜೆಟ್ಟಿನಲ್ಲಿ ಸೇರಿ ಅವರೇ ಇದರ ಸರ್ವೆಯನ್ನು ಕೂಡ ಮುನಿರಾಬಾದ್‌ನಲ್ಲಿ ಮಾಡಿ ಈಗಾಗಲೇ ಸನ್ಮಾನ್ಯ ಮಂತ್ರಿಗಳು ಹೇಳಿರುವ ಹಾಗೆ ಅವರು ತಮ್ಮ ವರದಿಯಲ್ಲಿ 222 ಕಿ.ಮೀ. ಉದ್ದವೆಂದು ಬರೆದಿದ್ದಾರೆ. ನಮಗೆ ಇರುವ ಮಾಹಿತಿ ಪ್ರಕಾರ ಸುಮಾರು 247.ಕಿ.ಮೀ. ಉದ್ದ ಈ ರೈಲು ಮಾರ್ಗ ಇದೆ. ಇದರಲ್ಲಿ 220 ಕಿ.ಮೀ. ಉದ್ದ ನಮ್ಮ ಕರ್ನಾಟಕದ ಭಾಗದಲ್ಲಿ ಬರುತ್ತದೆ. ಇನ್ನುಳಿದದ್ದು ಆಂಧ್ರ ಪ್ರದೇಶದ ಭಾಗದಲ್ಲಿ ಬರುತ್ತದೆ. ಇದಕ್ಕೆ ಮೂರು ಸಾವಿರ ಎಕರೆ ಭೂಮಿಯನ್ನು ಅಕ್ವೈರ್ ಮಾಡಬೇಕಾಗಿದೆ.

ಉಪಾಧ್ಯಕ್ಷರು :- Clarification ಕೇಳಿ. ಏನಾಗಬೇಕೆಂದು ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ :- ಸರ್, clarification ಅನ್ನೇ ಕೇಳುತ್ತಿದ್ದೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕೊಡಿ, ಏನಿದೆ ಎನ್ನುವುದನ್ನು ಹೇಳುತ್ತೇನೆ. ನಾನು ಇನ್ನೂ ಏನು ಮಾತನಾಡಿಲ್ಲ.

ಉಪಾಧ್ಯಕ್ಷರು :- ಈಗ ಅವರು ಉತ್ತರ ಕೊಟ್ಟಿದ್ದಾರೆ. ಈಗ ಅದರ ಮೇಲೆ ಏನು clarifications ಬೇಕು ಎನ್ನುವುದನ್ನು ಕೇಳಿ.

ಶ್ರೀ ವೆಂಕಟರಾವ್ ನಾಡಗೌಡ :- ಸರ್, ಏನಾಗಿದೆಯೆಂದು ನಾನು ಹೇಳುತ್ತಿದ್ದೇನೆ. clarification ಹೇಳುತ್ತಿದ್ದೇನೆ. ಈಗ ಏನಾಗಿದೆಯೆಂದರೆ ಇದು ಇಷ್ಟು ಉದ್ದ ಇದೆ, ಇಷ್ಟಾಗಿದೆ ಈಗ ಕೊಟ್ಟಿದ್ದಾರಲ್ಲ. ಇದರಲ್ಲಿ ನಮ್ಮ ಹತ್ತಿರ 227 ಕಿ.ಮೀ. ಎಂದು ಇದೆ. ಇದರಲ್ಲಿ 219 ಕಿ.ಮೀ. ಎಂದು ಇದೆ.

ಉಪಾಧ್ಯಕ್ಷರು :- ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕೆ ಏನೇನು ಕ್ರಮ ಕೈಗೊಂಡಿದ್ದಾರೆಂದು ಹೇಳಿದ್ದಾರೆ, ಅದರ ಮೇಲೆ ನೀವು clarification ಕೇಳಿ.

ಶ್ರೀ ವೆಂಕಟರಾವ ನಾಡಗೌಡ :- ಅದನ್ನೇ ಕೇಳುತ್ತೇನೆ. ಒಂದು ನಿಮಿಷ ನಮಗೆ ಮಾತನಾಡಲಿಕ್ಕೆ ಬಿಟ್ಟರೆ ... ನೀವು ಮಾತನಾಡಲಿಕ್ಕೆ ನಮಗೆ ಯಾವಾಗಲೋ ಒಂದು ಸಾರಿ ಅವಕಾಶ ಕೊಡುತ್ತೀರಿ.ನಮ್ಮ ಪರಿಸ್ಥಿತಿ ಹೇಗಾಗಿದೆಯೆಂದರೆ, ಒಂದು ನಿಮಿಷ ಅಧ್ಯಕ್ಷರೆ, ಈಗ ದೆಹಲಿಗೆ ಹೋಗಿ ಏನಾದರೂ ಕೇಳಿದರೆ ಸೌತ್ ಇಂಡಿಯ ಎಂದರೆ ಮದ್ರಾಸ್ ಎನ್ನುತ್ತಾರೆ. ಇಲ್ಲಿ ಬಂದು ಏನಾದರೂ ಅಂದುಬಿಟ್ಟರೆ ನಾವು ಉತ್ತರ ಕರ್ನಾಟಕ ಎಂದರೆ ನಮಗೆ ಹೈದರಾಬಾದ್- ಕರ್ನಾಟಕ ಇದ್ದೇವೆ ಎಂದು ಸಹ ಇಲ್ಲ. ಈಗ ನಮಗೆ ಸಿಕ್ಕ ಅವಕಾಶದಲ್ಲಿ ಹೇಳುವುದನ್ನು ಬೇಡವೆಂದು ಹೇಳಿಬಿಟ್ಟರೆ ನಾವು ಸುಮ್ಮನೆ ಕುಳಿತಿರಬೇಕಾಗುತ್ತದೆ, ತಾವು ದಯವಿಟ್ಟು ನಮ್ಮ ರಕ್ಷಣೆ ಮಾಡಬೇಕು, ಎಲ್ಲರೂ ಮಾತನಾಡಿದ್ದಾರೆ, ನಮಗೆ ಎರಡು ನಿಮಿಷ ಕೊಡಿ, ಇದ್ದುದನ್ನು ಸದನಕ್ಕೆ ಹೇಳುತ್ತೇನೆ. ಅದರ ಅಂದಾಜು 800 ಕೋಟಿ ರೂ.ಗಳು ಎಂದು ಹೇಳಿದ್ದಾರೆ. ಇಲ್ಲಿ 700 ಕೋಟಿ ರೂ.ಗಳು ಎಂದಿದ್ದಾರೆ ಇರಲಿ. ನಮಗೆ ಬಂದಿರುವ ಮಾಹಿತಿ ಪ್ರಕಾರ 11.09.2007ಕ್ಕೆ G.O. issue ಆಗಿ ಸರ್ಕಾರ 50% ಮತ್ತು ರೈಲ್ವೆ ಇಲಾಖೆ 50% ಹಣವನ್ನು ಕೊಡಬೇಕೆಂಬುದಕ್ಕೆ G.O issue ಆಗಿದೆ. ಅದಾದ ಮೇಲೆ ಕರ್ನಾಟಕ ಸರ್ಕಾರ ರೈಲ್ವೆ ಇಲಾಖೆಯೊಂದಿಗೆ ಒಂದು MOU ಅನ್ನು ಮಾಡಬೇಕಾಗಿದೆ. ಆ MOU ಮಾಡುವುದಕ್ಕೆ ಇದುವರೆಗೆ ಏನು ಕ್ರಮ ತೆಗೆದುಕೊಂಡಿಲ್ಲ. MOU ಆಗಿಲ್ಲ. ಆಮೇಲೆ ಇಲ್ಲಿ ಐದು ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಇದುವರೆಗೆ MOU ಆಗಿಲ್ಲ. ಒಂದು ಪೈಸೆ ಕೂಡ ಬಿಡುಗಡೆಯಾಗಿಲ್ಲ. ಐದು ಕೋಟಿ ರೂ.ಗಳು ರಿಲೀಸ್ ಆಗಿದೆಯೆಂದು ಇಲ್ಲಿ ಹೇಳುತ್ತಾರೆ. MOU ಆಗಿರುವ ಬಗ್ಗೆ ಏನೂ ಹೇಳಿಲ್ಲ. MOU ಆಗಿಲ್ಲ. ಐದು ಕೋಟಿ ರೂ.ಗಳ ಹಣ ಸಹ ಬಿಡುಗಡೆಯಾಗಿಲ್ಲವೆಂದು ನಮ್ಮ ಮಾಹಿತಿ. ಹಾಗಾಗಿ 20ನೇ ತಾರೀಖಿಗೆ ಒಂದು ಪತ್ರ 10 ಕೋಟಿ ರೂ.ಗಳಿಗೆ ಎಂದು ಹೇಳಿದ್ದಾರೆ. 20 ಕೋಟಿ ರೂ.ಗಳ ಹಣ ಬಿಡುಗಡೆ ಮಾಡುವುದಕ್ಕೆ ಈಗಾಗಲೇ ಎರಡು ಮೂರು ಪತ್ರಗಳನ್ನು ರೈಲ್ವೆ ಇಲಾಖೆಯವರು ಇವರಿಗೆ ಬರೆದಿದ್ದಾರೆ, ಅದಲ್ಲದೆ ರೈಲ್ವೆ ಇಲಾಖೆಯವರು ಭೂಮಿಯನ್ನು ಅಕ್ವೈರ್ ಮಾಡಲಿಕ್ಕೆ ಸಂಪೂರ್ಣ ಹಣವನ್ನು ಕೊಟ್ಟಿದ್ದಾರೆ. ಆ ಹಣ ರಾಯಚೂರು ಹಾಗು ಕೊಪ್ಪಳ ಜಿಲ್ಲಾಧಿಕಾರಿಗಳ ಹತ್ತಿರ ಇದೆ. ಇದುವರೆಗೂ ಕೂಡ ಭೂಮಿಯನ್ನು ಅಕ್ವೈರ್ ಮಾಡಲಿಕ್ಕೆ ಕೇವಲ 35 ಕಿ.ಮೀ ಭೂಮಿ ಮಾತ್ರ ಅಕ್ವೈರ್ ಆಗಿದೆ. ಅದಕ್ಕಿಂತ ಮೂರು ಸಾವಿರ ಎಕರೆಯಲ್ಲಿ 35-36 ಎಕರೆ ಅಷ್ಟಾಗಿದೆ. ಇನ್ನು ಉಳಿದ ಭೂಮಿ ಅಕ್ವೈರ್ ಆಗುವುದಕ್ಕೆ ಅಲ್ಲಿನ

acquisition officers ಇನ್ನೂ ಅಲ್ಲಿ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈಗ 12 ವರ್ಷವಾದರೂ ಭೂಮಿಯ ಅಕ್ವೈರ್ ಮುಗಿದಿಲ್ಲ. ಆದರೆ ಆಂಧ್ರ ಪ್ರದೇಶದಲ್ಲಿ ಈಗಾಗಲೇ ಅವರು ರೈಲು ಮಾರ್ಗ ಮುಗಿಸಿದ್ದಾರೆ. ನಮ್ಮ ಹಣ ಅದು. ಪ್ರತಿ ವರ್ಷ ಬಜೆಟ್ಟಿನಲ್ಲಿ ಅವರೇನು ಕೋಟಿ ಕೋಟಿ ರೂ.ಗಳನ್ನು ಕೊಡುತ್ತಿದ್ದಾರೆ. ಆ ಹಣದಲ್ಲಿ ಕೃಷ್ಣಾ ನದಿಗೆ ಬ್ರಿಡ್ಜ್ ಕೂಡ ಮುಗಿದುಹೋಗಿದೆ. ಈಗ ನಮ್ಮ ಭಾಗದಲ್ಲಿ ಈ ರೈಲ್ವೆಯ ಕಾಮಗಾರಿ ಇನ್ನೂ ಕೂಡ ಮುಗಿಸಿಲ್ಲ. ಈಗ 350 ಕೋಟಿ ರೂ.ಗಳನ್ನು ನೀವು ಎರಡು ಮೂರು ವರ್ಷಗಳಲ್ಲಿ ಮುಗಿಸಬೇಕಾದರೆ ನಿಜವಾಗಿಯೂ ಹೈದರಾಬಾದ್-ಕರ್ನಾಟಕದ ಬಗ್ಗೆ ಅಥವ ಸರ್ಕಾರಕ್ಕೆ ಬದ್ಧತೆ ಇದ್ದರೆ ಈಗ ಅದಕ್ಕೆ ಒಂದು 100 ಕೋಟಿ ರೂ.ಗಳನ್ನಾದರೂ ಬಜೆಟ್ಟಿನಲ್ಲಿ ಇಟ್ಟರೆ ನಮಗೆ ಆಗುತ್ತದೆಂದು ವಿಶ್ವಾಸ ಬರುತ್ತದೆ. ನೀವು 5 ಕೋಟಿ , 10 ಕೋಟಿ ಇಟ್ಟರೆ 12 ವರ್ಷವಾಗುತ್ತದೆ. ಇನ್ನು ನಾವು ಸಾಯುವವರೆಗೂ ಈ ರೈಲ್ವೆ ಕೆಲಸ ಮುಗಿಯುವ ಹಾಗಿಲ್ಲ. ಇದನ್ನು 50-50% ಗೆ ಒಪ್ಪಿಕೊಂಡಿದ್ದಕ್ಕೆ ಏನೂ ಪ್ರಯೋಜನವಾಗುತ್ತದೆ? ಈಗ ನೀವು ಬೆಳಗಾವಿಯಲ್ಲಿ ಸದನ ನಡೆಸಿದ್ದೀರಿ ಇಂಥ ಸಮಯದಲ್ಲಾದರೂ ಸರ್ಕಾರ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಬೇಕು. ಹಾಗಾಗಿ ಇದಕ್ಕೆ ನೀವೇನಾದರೂ ಇವತ್ತೇ 100, 200 ಕೋಟಿ ರೂ.ಗಳನ್ನು ಕೊಡುತ್ತೇವೆಂದರೆ ರೈಲ್ವೇ ಇಲಾಖೆಯವರು ತಯಾರು ಇದ್ದಾರೆ, 350 ಕೋಟಿ ರೂ.ಗಳನ್ನು ಕೊಟ್ಟರೆ ಅವರು ನಾಳೆಯೇ ಕೊಡುತ್ತಾರೆ. ಈಗಾಗಲೇ ಸಚಿವರು ಹೇಳಿದ್ದಾರೆ, ಅವರು 35 ಕಿ.ಮೀ.ಗೆ ಟೆಂಡರ್ ಕರೆದಿದ್ದಾರೆ, ಆದರೆ MOU ಇನ್ನೂ ಆಗಿಲ್ಲ ಹಣ ಬಿಡುಗಡೆಯಾಗಿಲ್ಲ. ಇದಕ್ಕೆ ಎಷ್ಟು ಪ್ರಾಮುಖ್ಯತೆ ಇದೆ ಎಂದರೆ ಇದು ಬಾಂಬೆ ಮತ್ತು ಹೈದರಾಬಾದ್ ಕರ್ನಾಟಕವನ್ನು ಲಿಂಕ್ ಮಾಡುತ್ತದೆ. ಅದಲ್ಲದೆ ನಿಮ್ಮ ಥರ್ಮಲ್ ಪವರ್‌ಗೆ ಕೋಲ್ ತರುವುದಕ್ಕೆ 100 ಕಿ.ಮೀ. ಕಡಿಮೆಯಾಗುತ್ತದೆ. ಹಾಗಾಗಿ ಎಲ್ಲಾ ಭಾಗದಲ್ಲಿಯೂ ಕೂಡಿ ಹೋಗುವುದರಿಂದ ಇದು ಬಹಳ ಪ್ರಾಮುಖ್ಯವಾಗಿರುವ ರೈಲ್ವೆ ಲೈನ್. ಆದರೆ ಇದು ನಿರ್ಲಕ್ಷ್ಯಕ್ಕೆ ಒಳಗಾಗಿದೆ, ದಯವಿಟ್ಟು ಸರ್ಕಾರ ಇದರ ಬಗ್ಗೆ ಗಮನಹರಿಸಬೇಕು, ಬದ್ಧತೆಯನ್ನು ತೋರಿಸಬೇಕು. ಬೆಳಗಾವಿ ಅಧಿವೇಶನದಲ್ಲಿ ಇದಕ್ಕೆ 100 ಕೋಟಿ ರೂ.ಗಳನ್ನು ಬಿಡುಗಡೆ ಮಾಡುವುದಕ್ಕೆ ಸನ್ಮಾನ್ಯ ಸಚಿವರು ಒಪ್ಪುತ್ತಾರೆಂದು ಹೇಳಿ ಇದನ್ನು ತಮ್ಮ ಮೂಲಕ ಅವರ ಗಮನಕ್ಕೆ ತಂದು ಅವರನ್ನು ವಿನಂತಿಸುತ್ತೇನೆ.

ಶ್ರೀ ಕರಡಿ ಸಂಗಣ್ಣ :- ಮಾನ್ಯ ಉಪಾಧ್ಯಕ್ಷರೆ, ಈ ಗಿಣಿಗೇರ ಮತ್ತು ಮೆಹಬೂಬ್ ನಗರದ ರೈಲ್ವೆ ಮಾರ್ಗದ ಬಗ್ಗೆ ಸುಮಾರು ಇದರ ಬಗ್ಗೆ ವೆಂಕಟರಾವ್

ನಾಡಗೌಡರು ಸವಿಸ್ತಾರವಾಗಿ ಮಾತನಾಡಿದ್ದಾರೆ, ಆದಾಗ್ಯೂ ಕೂಡ ಇದು ಪ್ರಾಮುಖ್ಯವಾದಂತಹ ರೈಲು ಮಾರ್ಗ. ಈಗಾಗಲೇ ಇದು ವಿಳಂಬವಾಗಿದೆ. 9-10 ವರ್ಷಗಳಿಂದ, ಮಾನ್ಯ ದೇವೇಗೌಡರು ಪ್ರಧಾನಿಯಾದ ಸಂದರ್ಭದಲ್ಲಿ ಮಾನ್ಯ ರಾಯರೆಡ್ಡಿಯವರು ಲೋಕಸಭಾ ಸದಸ್ಯರಾಗಿದ್ದರು, ಅವರು ಆ ಒಂದು ಸರ್ವೆ ಕಾರ್ಯಕ್ರಮದ ಮೂಲಕ ಅದನ್ನು ಪ್ರಾರಂಭಿಸಿದರು. ಆದರೆ ಇದುವರೆಗೂ ಕೂಡ ಆಂಧ್ರಪ್ರದೇಶದ ಕಳಕಳಿ ಹಾಗು ಬದ್ಧತೆಯನ್ನು ನೋಡಿದಾಗ ಒಟ್ಟು 27 ಕಿ.ಮೀ ನಷ್ಟು ಆಂಧ್ರಪ್ರದೇಶದಲ್ಲಿ ಬರುವಂಥ ರೈಲು ಮಾರ್ಗವನ್ನು ಈಗ ಕಂಪ್ಲೀಟ್ ಮಾಡಿದ್ದಾರೆ. ಮಾನ್ಯ ಜನಾರ್ಧನ ರೆಡ್ಡಿಯವರನ್ನು ಹಾಗು ಬಿ.ಜೆ.ಪಿ.ಸರ್ಕಾರವನ್ನು ನಾವು blame ಮಾಡುವಂಥದ್ದಲ್ಲ. ಆದರೆ ಇವತ್ತು ವಿಶೇಷವಾಗಿ ಬೆಳಗಾವಿಯಲ್ಲಿ ಅಧಿವೇಶನವನ್ನು ಕರೆದಿರುವುದರ ಅರ್ಥವೇನೆಂದರೆ ಉತ್ತರ ಕರ್ನಾಟಕದ ಭಾಗಕ್ಕೆ ಅನ್ಯಾಯವಾಗಿದೆ. ಹೈದರಾಬಾದ್-ಕರ್ನಾಟಕಕ್ಕೆ ಅನ್ಯಾಯವಾಗಿದೆ. ಈ imbalance ಅನ್ನು ಸರಿಮಾಡಬೇಕೆನ್ನುವ ಅರ್ಥದ ಮೇಲೆ ಇವತ್ತು ಗಡಿನಾಡ ಸಮಸ್ಯೆ ಇರಬಹುದು, ಜಲದ ಸಮಸ್ಯೆ ಇರಬಹುದು ಹಾಗು ಈ ಅಭಿವೃದ್ಧಿ ಅಂಗವಾಗಿ ವಿಶೇಷವಾಗಿ ಈ ಸಭೆಯನ್ನು ಕರೆದಿದ್ದಾರೆಂದು ನಾವೆಲ್ಲಾ ಭಾವಿಸಿಕೊಂಡಿದ್ದೇವೆ. ಆ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹಿಂದಿನ ವರ್ಷದಲ್ಲಿ 5 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಕೊಳ್ಳುವುದಕ್ಕೆ provision ಮಾಡಿಕೊಂಡಿದ್ದಾರೆ. ಈ ವರ್ಷ ಮಾನ್ಯ ಜನಾರ್ಧನ ರೆಡ್ಡಿಯವರು ಮಂತ್ರಿಗಳು ಹೇಳಿದ ಹಾಗೆ 10 ಕೋಟಿ ರೂ.ಗಳನ್ನು ...

ಉಪಾಧ್ಯಕ್ಷರು :- ಸಚಿವರು ಉತ್ತರ ಹೇಳಿ.

ಶ್ರೀ ಕರಡಿ ಸಂಗಣ್ಣ :- ನಾವು ಹೇಳುತ್ತೇವೆ, ಇಂಥದಕ್ಕೆ ನೀವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ಬಾಂಬೆ ಕರ್ನಾಟಕದಿಂದ...

(ಗೊಂದಲ)

ಶ್ರೀ ಎಸ್. ಬಸವರಾಜ ಬೊಮ್ಮಾಯಿ :- ಎಷ್ಟು ಹೊತ್ತು? ಪ್ರಶ್ನೆ ಮಾಡಿದರೆ ಹೇಗೆ? ಸಪ್ಲಿಮೆಂಟರಿ ಕೇಳಿ .

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಕೂಡ ಅದಕ್ಕೆ ಸಹಿ ಹಾಕಿದ್ದಾರೆ. ಈಗ ನಮ್ಮ ಗಮನ ಸೆಳೆಯುವ ಸೂಚನೆ ಮೇಲೂ ಅರ್ಧ ಗಂಟೆ ಚರ್ಚೆಯಾಯಿತು.

ಅವರ ಭಾಗದ್ದು ಮುಖ್ಯವಾಗಿದೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಉತ್ತರ ಕರ್ನಾಟಕದ ಅಭಿವೃದ್ಧಿ ಎಂದು ಹೇಳುತ್ತೀರಿ. ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಎಸ್. ಬಸವರಾಜ ಬೊಮ್ಮಾಯಿ :- ಬಾಲಕೃಷ್ಣ ನಿಮ್ಮ ಅವಶ್ಯಕತೆಯಿಲ್ಲ. ಅವರು defend ಮಾಡಿಕೊಳ್ಳುತ್ತಾರೆ. ನಿಮ್ಮ ವಕಾಲತ್ತು ಬೇಕಾಗಿಲ್ಲ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರ ಭಾಗದ ಬಗ್ಗೆ ಮಾತನಾಡಲಿಕ್ಕೆ ಅವರಿಗೆ ಅವಕಾಶ ಕೊಡಿ.

ಶ್ರೀ ಎಸ್. ಬಸವರಾಜ ಬೊಮ್ಮಾಯಿ :- ಅವರು ಸ್ಪೆಸಿಫಿಕ್ ಆಗಿ ಹೇಳಬೇಕು.

ಶ್ರೀ ಹೆಚ್.ಸಿ. ಬಾಲಕೃಷ್ಣ :- ಅವರು ಸ್ಪೆಸಿಫಿಕ್ ಆಗಿ ಹೇಳುತ್ತಾರೆ. ... ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ ಎಸ್. ಬಸವರಾಜ ಬೊಮ್ಮಾಯಿ :- ಈಗಲೇ 7.30 ಸಮಯವಾಯಿತು. ಇನ್ನು 21 ಗಮನ ಸೆಳೆಯುವ ಸೂಚನೆಗಳಿವೆ. ಈ ಸದನದಲ್ಲಿ ಎಲ್ಲರಿಗೂ ಅವಕಾಶ ಕೊಡಬೇಕು.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ :- ಸಭಾಧ್ಯಕ್ಷರು ರಾತ್ರಿ 9.00 ಗಂಟೆಯವರೆಗೂ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಲಿ.

ಶ್ರೀ ಕರಡಿ ಸಂಗಣ್ಣ :- ಮಾನ್ಯ ಜನಾರ್ಧನ ರೆಡ್ಡಿಯವರು ಈ ಭಾಗದ ಜನರ ಬಗ್ಗೆ ಬಹಳ ಕಾಳಜಿ ಇದ್ದಂಥವರು ಇದ್ದಾರೆ, ಅವರು ಉತ್ತರ ಕೊಡುತ್ತಾರೆ, ಯಾಕೆ ತಾವು ನೀರಾವರಿ ಸಚಿವರು ಎದ್ದೆದ್ದು ಮಾತನಾಡುತ್ತೀರಿ?

ಶ್ರೀ ಎಸ್.ಬಸವರಾಜ ಬೊಮ್ಮಾಯಿ :- ಉತ್ತರ ಕೊಡುವ ಪ್ರಶ್ನೆಯಲ್ಲ.

ಶ್ರೀ ಕರಡಿ ಸಂಗಣ್ಣ :- ಜನಾರ್ಧನ ರೆಡ್ಡಿಯವರಿಗೆ ಬಳ್ಳಾರಿ ಮತ್ತು ಗುಲಬರ್ಗಾ ಮತ್ತು ರಾಯಚೂರಿನ ಜಿಲ್ಲೆಗಳ ಬಗ್ಗೆ ಕಳಕಳಿಯಿದೆ.

ಶ್ರೀ ಎಸ್.ಬಸವರಾಜ ಬೊಮ್ಮಾಯಿ :- ಸ್ಪೆಸಿಫಿಕ್ ಆಗಿ ಸಪ್ಲಿಮೆಂಟರಿ ಕೇಳಿ, ಅದು ಬಿಟ್ಟು ಭಾಷಣ ಮಾಡಿದರೆ ಹೇಗೆ?

ಶ್ರೀ ಕರಡಿ ಸಂಗಣ್ಣ :- ಭಾಷಣ ಮಾಡುವುದಲ್ಲ. ತಾವು ಗಮನಿಸಿದರೆ ಈಗ ಒಂದೇ ಅರ್ಥ, ಆಂಧ್ರಪ್ರದೇಶದವರು 27 ಕಿ.ಮೀ. ಅನ್ನು ಈಗಾಗಲೇ ಕಂಪ್ಲೀಟ್ ಮಾಡಿದ್ದಾರೆ. ಕರ್ನಾಟಕ ರಾಜ್ಯದ ನಮ್ಮ ರೈಲು ಮಾರ್ಗದ ಬಗ್ಗೆ ನಾವೂ ಈಗ ಕಡೆಗಾಣಿಸುತ್ತಿದ್ದೇವೆ. ಹಾಗಾಗಿ ಜನಾರ್ಧನ ರೆಡ್ಡಿಯವರು ಆಸಕ್ತಿ ಹೊಂದಿದ್ದಾರೆ. ಅವರಿಗೆ ಕಳಕಳಿ ಇದೆ. ಇವತ್ತು ಸ್ಪೆಸಿಫಿಕ್ ಆಗಿ 150 ಕೋಟಿ ಹಣವನ್ನು ಈ ಒಂದು ಸಾಲಿನಲ್ಲಿ ಅವರು ಇಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ ರಾಯಚೂರಿನಲ್ಲಿರುವ ಥರ್ಮಲ್ ಪ್ಲಾಂಟ್‌ಗೆ ಕೋಲ್ ಅನ್ನು ಸಾಗಿಸುವುದಕ್ಕೆ ನಮಗೆ ಖರ್ಚಾಗುವ ಹಣ ಏನಿವತ್ತು ಉಳಿತಾಯವಾಗುತ್ತದೆ. ನಮ್ಮ ರಾಯಚೂರು ಜಿಲ್ಲೆ ಭತ್ತ ಬೆಳೆಯುವಂಥ ನಾಡು. ಇವತ್ತು ಏನು ಭತ್ತವನ್ನು ಸಾಗಾಣಿಕೆ ಮಾಡುವುದಕ್ಕೆ ಆ ಮಾರ್ಗ ಸಹಕಾರಿಯಾಗುತ್ತದೆ. ಬಾಂಬೆಗೆ ಕರ್ನಾಟಕದಿಂದ ಹೋಗುವಂಥ ಮೆಹಬೂಬ್ ರೈಲು ಗುಲಬರ್ಗಾದಿಂದ ಹೈದರಾಬಾದ್‌ಗೆ ಹೋದರೆ 150 ಕಿ.ಮೀ ಉಳಿತಾಯವಾಗುತ್ತದೆ. ಇದು ಬಹಳ viable ಇರುವಂಥ ಮಾರ್ಗವಾಗಿರುವುದರಿಂದ ಮಾನ್ಯ ಜನಾರ್ಧನ ರೆಡ್ಡಿಯವರು ಈ ವರ್ಷ 150 ಕೋಟಿ ರೂ.ಗಳನ್ನು ಒದಗಿಸುವಂಥ ಕೆಲಸವನ್ನು ಮಾಡಬೇಕೆಂದು ಒತ್ತಾಯ ತಮ್ಮ ಮೂಲಕ ಸಚಿವರನ್ನು ವಿನಂತಿಸುತ್ತೇನೆ.

ಶ್ರೀ ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೆ, ಈ project ಮೊಟ್ಟಮೊದಲನೆಯ ದಿನ take up ಮಾಡಿರುವುದು ನಮ್ಮ South Central Railway, Sikandarabadನವರು. ಅಲ್ಲಿಂದ ನಮ್ಮ South Western Railwayಗೆ transfer ಮಾಡುವುದಕ್ಕೆ 2008ರವರೆಗೆ ಅವರು time ತೆಗೆದುಕೊಂಡಿದ್ದಾರೆ. 2008ರಲ್ಲಿ transfer ಆಗಿರುವುದು. ಎಂದರೆ, ಅವರಲ್ಲಿ ಬಹಳಷ್ಟು ವಿಳಂಬವಾಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರಿಗೆ, ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದ ಬಗ್ಗೆ, ಅವರಿಗೆ ಇರುವಂಥ ಕಾಳಜಿಯ ಒಂದು ವಿಷಯದಲ್ಲಿ, ನಾನು ಈ ಸಂದರ್ಭದಲ್ಲಿ

ಹೇಳಬಯಸುವುದೇನೆಂದರೆ, particularಆಗಿ ಈ projectಗೆ, ಇವತ್ತು ಏನು ಈ ನಮ್ಮ ಗಿನಿಗೆರೆ ಮತ್ತು ಮುನಿರಾಬಾದ್, ಮೆಹಬೂಬ್‌ನಗರದ ಈ project ಏನು ಇದೆ, 150 ಕೋಟಿ ರೂಪಾಯಿಗಳ ಬಜೆಟನ್ನು allocate ಮಾಡಿದ್ದಾರೆ. ಇಲ್ಲಿ ವಿಷಯ ಏನೆಂದರೆ, ನಮ್ಮ ಸನ್ಮಾನ್ಯ ಶಾಸಕರುಗಳಲ್ಲಿ, ನಾಡಗೌಡರು ಹಾಗೂ ಕರಡಿ ಸಂಗಣ್ಣನವರು ಅರ್ಥ ಮಾಡಿಕೊಳ್ಳಬೇಕಾಗಿರುವುದು ಏನೆಂದರೆ, ರೈಲ್ವೆ ಇಲಾಖೆ ಇವತ್ತು land acquisition ಆಗಲಿಲ್ಲ ಎಂದು ಹೇಳಿದರೆ, 51 ಎಕರೆ, ಅವರು 31 ಎಕರೆ ಎಂದು ಹೇಳಿದ್ದಾರೆ. 51 ಎಕರೆ acquisition ಆಗಿದೆ, ಜೊತೆಗೆ Railway Department ನವರು ಅದನ್ನು ತೆಗೆದುಕೊಳ್ಳುವುದಕ್ಕೆ ಕೂಡ ಹೇಳಿದ್ದಾರೆ. ಜೊತೆಗೆ railway ಇಲಾಖೆಯವರು ನಮಗೆ 5 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದಾಗ, ಮಾನ್ಯ ಶಾಸಕರಾದ ನಾಡಗೌಡರು ಹಣ ಬಿಡುಗಡೆಯಾಗಿಲ್ಲ ಎಂದು ಹೇಳುತ್ತಿದ್ದರು. 07-03-2008ರಂದು G.O. issue ಆಗಿ 5 ಕೋಟಿ ಹಣ ರೈಲ್ವೆ ಇಲಾಖೆಯ accountಗೆ transfer ಆಗಿದೆ. ಅವರು ಯಾವ ರೀತಿ ಕೇಳುತ್ತಿದ್ದಾರೆ ಆ ರೀತಿ ಕೊಡುತ್ತಿದ್ದಾರೆ. ಇನ್ನೂ 10 ಕೋಟಿ amount ಕೇಳಿದ್ದಾರೆ, ಮೊನ್ನೆ 20 ನೇ ತಾರೀಖಿನಂದು ಹಣ ಕೇಳಿದ್ದಾರೆ. 10 ಕೋಟಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಈಗಾಗಲೇ ಸರ್ಕಾರದ order ಆಗಿದೆ. ಅವರು ಯಾವ ರೀತಿ ಹಣ ಕೇಳುತ್ತಿದ್ದಾರೆ, ಆ ರೀತಿಯಾಗಿ ಸರ್ಕಾರ ಹಣ ಕೊಡುತ್ತಿದೆ. 150 ಕೋಟಿ ರಾಜ್ಯ ಸರ್ಕಾರದ share ಇದೆ. 150 ಕೋಟಿ ಸಮೇತ ಅವರು ಖರ್ಚು ಮಾಡುವುದಕ್ಕೆ, 300 ಕೋಟಿ ಕೆಲಸ ಮಾಡುವುದಕ್ಕೆ ಅವರು ಸಿದ್ಧರಿದ್ದಾರೆ. ಯಾವ ಕ್ಷಣದಲ್ಲಿ ಹಣವನ್ನು ಕೇಳಿದರೂ ಕೂಡ, 150 ಕೋಟಿ ಹಣ ಕೊಡುವುದಕ್ಕೆ, ನಮ್ಮ ಇಲಾಖೆಯ ವತಿಯಿಂದ ನಾವು ಸಿದ್ಧವಾಗಿದ್ದೇವೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕರಡಿ ಸಂಗಣ್ಣ :- ಮಾನ್ಯ ಉಪಾಧ್ಯಕ್ಷರೆ, ಈಗ MOU ಆಗಿದೆಯೇ ಎಂದು ಸ್ಪಷ್ಟೀಕರಣ ಬೇಕು.

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, MOU ಆಗಿದೆ. ತಾವು ಅರ್ಥ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದ pink bookನಲ್ಲಿ mark ಆಗಿದೆ ಎಂದರೆ, ಅದು ಆಗಿದೆ ಎಂದು ಅರ್ಥ ಅಷ್ಟೆ.

ಶ್ರೀ ಕರಡಿ ಸಂಗಣ್ಣ :- ಮಾನ್ಯ ಉಪಾಧ್ಯಕ್ಷರೆ, ನಾವು ಅಭಿನಂದಿಸುತ್ತೇವೆ. 150 ಕೋಟಿ ಹಣವನ್ನು ಕೊಡುತ್ತೀರಿ ಎಂದು ಹೇಳಿದಿರಿ, ಧನ್ಯವಾದಗಳು ಮಾನ್ಯ ಜನಾರ್ಧನ ರೆಡ್ಡಿಯವರಿಗೆ.

ಶ್ರೀ ಜನಾರ್ಧನ ರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಇನ್ನೊಂದು ವಿಷಯ ನಾವು 150 ಕೋಟಿ ಹಣವನ್ನು ನಮ್ಮ ರಾಜ್ಯ ಸರ್ಕಾರದ ಕಡೆಯಿಂದ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿದ್ದರೆ, 2008-09ಕ್ಕೆ ಕೇಂದ್ರ ಸರ್ಕಾರದ, ರೈಲ್ವೆ ಇಲಾಖೆಯವರು ಕೇವಲ 64 ಕೋಟಿ ರೂಪಾಯಿಗಳನ್ನು ಮಾತ್ರ ಮೀಸಲಿಟ್ಟಿದ್ದಾರೆ. ಆದರೆ, ಕೇಂದ್ರ ಮತ್ತು ರಾಜ್ಯ 50-50 share ನಲ್ಲಿ ಆದಂತಹ ಈ ಕಾರ್ಯಕ್ರಮದಲ್ಲಿ 700 ಕೋಟಿಯಲ್ಲಿ ನಮ್ಮ ರಾಜ್ಯ ಸರ್ಕಾರದ share 350 ಕೋಟಿ ರೂಪಾಯಿಗಳು. ಅದರಲ್ಲಿ 150 ಕೋಟಿ ನಾವು allocate ಮಾಡಿದರೆ, ಅವರು ಕೇವಲ 64 ಕೋಟಿ ರೂಪಾಯಿಗಳನ್ನು ಮಾತ್ರ allocate ಮಾಡಿದ್ದಾರೆ. ಅವರು 150 ಕೋಟಿ ಹಣವನ್ನು ಖರ್ಚು ಮಾಡುವುದಕ್ಕೆ ready ಇದ್ದರೆ, 150 ಕೋಟಿ ಹಣವನ್ನು ಸರ್ಕಾರದ ಪರವಾಗಿ ಕೊಡುವುದಕ್ಕೆ ಹಣ ready ಆಗಿದೆ.

ಉಪಾಧ್ಯಕ್ಷರು :- ಈಗ ಮಾನ್ಯ ವಿರೂಪಾಕ್ಷಪ್ಪನವರು ಮಾತನಾಡಬೇಕು.

(ಋ) ವಿಷಯ: <u>ರಾಜ್ಯದಲ್ಲಿ ಅಡಿಕೆ ಬೆಲೆ ಕುಸಿದ ಪ್ರಯುಕ್ತ ರೈತರು ಸಂಕಷ್ಟಕ್ಕೀಡಾಗಿರುವುದರಿಂದ ಸೂಕ್ತ ಬೆಂಬಲ ಬೆಲೆ ಘೋಷಿಸುವ ಬಗ್ಗೆ.</u>

ಶ್ರೀ ಕೆ. ಮಾಡಾಳ್ ವಿರುಪಾಕ್ಷಪ್ಪ (ಚೆನ್ನಗಿರಿ) :- **ಮಾನ್ಯ ಉಪಾಧ್ಯಕ್ಷರೆ,** ಇಲ್ಲಿ ಅಡಿಕೆಯು ಕರ್ನಾಟಕ ರಾಜ್ಯದ ಬಹು ಮುಖ್ಯ ವಾಣಿಜ್ಯ ಬೆಳೆಯಾಗಿರುತ್ತದೆ. ಕರ್ನಾಟಕ ರಾಜ್ಯದ 8 ಜಿಲ್ಲೆಗಳಲ್ಲಿ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ದಾವಣಗೆರೆ, ಶಿವಮೊಗ್ಗಗಳಲ್ಲಿ ಇದು ವಾಣಿಜ್ಯ ಬೆಳೆಯಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಕೃಷಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ,

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ. ಮಾಡಾಳ್ ವಿರುಪಾಕ್ಷಪ್ಪ ಇವರು ನಿಯಮ 73 ರಡಿಯಲ್ಲಿ ರಾಜ್ಯದಲ್ಲಿ ಪ್ರಸ್ತುತ ಅಡಿಕೆ ಬೆಲೆ ತೀವ್ರ ಪ್ರಮಾಣದಲ್ಲಿ